**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 06-07-2026:**

ಮುಂದುವರೆದ ಪಾಟೀಸವಾ**ಲುಃ ಆರೋಪಿ ಪರ** ಶ್ರೀ ಬಿ ಜೆ ಪಿ ಎಸ್ **ವಕೀಲರಿಂದಃ**

87.ಗದ್ದೆರಾಮೇಶ್ವರ ಬಡಾವಣೆಯಲ್ಲಿ ಆರೋಪಿತರು ಹೊಂದಿದ್ದ ವಾಸದ ಮನೆಯ ಪಕ್ಕದಲ್ಲಿದ್ದ ಕೊಬ್ಬರಿ ಗೋದಾಮನ್ನು 1996ರಲ್ಲಿ ಕಟ್ಟಿರುತ್ತಾರೆಂದು ತಿಳಿದುಬಂದಿರುತ್ತದೆ. ಆ ಮನೆ ಯಾರಿಂದ ಬಂತು ಎನ್ನುವುದು ನನಗೆ ಗೊತ್ತಿತ್ತು. ಈಗ ನನಗೆ ತೋರಿಸಿದ ದಾಖಲೆಯನ್ನು ದಿಃ25-7-1997 ರಂದು ಬಾಲಸುಬ್ರಹ್ಮಣ್ಯಗೌಡ ರವರು ಜಯಲಕ್ಷ್ಮಿರವರಿಗೆ ಮಾಡಿಕೊಟ್ಟ ವಿಭಾಗ ಪತ್ರ ಎಂದರೆ ಸರಿ. ಈ ದಾಖಲೆಯನ್ನು **ನಿಡಿ-40** ಎಂದು ಗುರುತಿಸಲಾಯಿತು. ಅದೇ ತೋಟದಲ್ಲಿ ಬೋರ್ವೆಲ್ ಇತ್ತು. ಅದನ್ನು ನಿಡಿ-40ರಲ್ಲಿ ತೋರಿಸಿದ್ದಾರೆಂದರೆ ನಿಜ. ಇಷ್ಟೆಲ್ಲ ಗೊತ್ತಿದ್ದರೂ ಕೂಡ ನಾನು ಆ ಬೋರ್ವೆಲ್ ನ್ನು ಕೊರೆಸಲು ಆರೋಪಿತರು 50ಸಾವಿರ ರೂ ಖರ್ಚು ಮಾಡಿದ್ದಾರೆಂದು ಹೇಳಿ ಅವರ ಖರ್ಚಿನ ಲೆಕ್ಕಕ್ಕೆ ತೆಗೆದುಕೊಂಡಿದ್ದೇನೆ ಎಂದರೆ ಸರಿ. 1997ರಲ್ಲಿ ಆ ಬೋರ್ವೆಲ್ ಇತ್ತು ಎಂದರೆ ನಿಜ.

88.ಸರ್ವೆ ನಂಬರ್ 135/3 ಈಗ ನನಗೆ ತೋರಿಸಿದ ದಾಖಲೆಯಂತೆ 1997-98ರಲ್ಲಿ ಜಯಲಕ್ಷ್ಮಿ ರವರ ಹೆಸರಿಗೆ ಆಗಿತ್ತು ಎಂದರೆ ಸಾಕ್ಷಿಯು 1998-99ರಲ್ಲಿ ಎನ್ನುತ್ತಾರೆ. ಸಾಕ್ಷಿಗೆ ತೋರಿಸಿದ ದಾಖಲೆಯನ್ನು **ನಿಡಿ-41** ಎಂದು ಗುರುತಿಸಲಾಯಿತು. ಆ ಬೋರ್ವೆಲ್ ಗೆ ಸಂಬಂಧಿಸಿದಂತೆ ವಿದ್ಯುತ್ ಸರಬರಾಜು ಬಿಲ್ಲನ್ನು ಬಾಲಸುಬ್ರಹ್ಮಣ್ಯಗೌಡ ರವರೇ ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ.

89.ಈಗ ನನಗೆ ತೋರಿಸಿದ ದಾಖಲೆಯನ್ನು ನನ್ನ ತನಿಖಾ ಕಾಲದಲ್ಲಿ ಸಾಕ್ಷಿದಾರರನ್ನು ವಿಚಾರಣೆ ಮಾಡುವ ಸಮಯದಲ್ಲಿ ಕೊಟ್ಟಿದ್ದರು ಎಂದರೆ ಸರಿ. ಸಾಕ್ಷಿಗೆ ತೋರಿಸಿದ ಈ ಎರಡೂ ಹಾಳೆಗಳ ದಾಖಲೆಯನ್ನು **ನಿಡಿ-42** ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಆ ಬಿಲ್ಲನ್ನು 1996 ರಿಂದ 2009ರವರೆಗೆ ಪರಿಗಣಿಸಿರುತ್ತೇನೆ ಎನ್ನುತ್ತಾರೆ. ಬೋರ್ವೆಲ್ 197ರಲ್ಲಿ ಇದ್ದುದರಿಂದ ಹಣ ಪಾವತಿ ಕೂಡ 1997ರಲ್ಲೇ ಆಗಿರುತ್ತದೆ ಎಂದರೆ ಸರಿಯಲ್ಲ. ದುರುದ್ದೇಶದಿಂದ ನಾನು ಆ ಬೋರ್ವೆಲ್ ಗೆ ಕೂಡ ಆರೋಪಿತರೇ ಖರ್ಚು ಮಾಡಿದ್ದೆಂದು ಅವರ ಖರ್ಚಿನ ಲೆಕ್ಕಕ್ಕೆ ಪರಿಗಣಿಸಿದ್ದೇನೆ ಎಂದರೆ ಸರಿಯಲ್ಲ.

90.ನನ್ನ ತನಿಖಾ ಕಾಲದಲ್ಲಿ ನಾನು ಆರೋಪಿತರಿಗೆ ಸ.ನಂ.135/3ರ ಮನೆಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸುವಂತೆ ನೋಟೀಸು ನೀಡಿದ್ದೆನು ಎಂದರೆ ಸರಿ. ಈಗ ತೋರಿಸಿದ ದಾಖಲೆ ಆ ನೋಟೀಸು ಎಂದರೆ ನಿಜ. ಅದನ್ನು **ನಿಡಿ-43** ಎಂದು ಗುರುತಿಸಲಾಯಿತು. ಆ ನೋಟೀಸಿಗೆ 4-8-2009ರಂದು ಆರೋಪಿತರು ಈಗ ತೋರಿಸಿದ ದಾಖಲೆಯಂತೆ ಉತ್ತರ ನೀಡಿದ್ದಾರೆ ಎಂದರೆ ನಿಜ. ಸದರಿ ದಾಖಲೆಯನ್ನು **ನಿಡಿ-44** ಎಂದು ಗುರುತಿಸಲಾಯಿತು. ನಿಡಿ-44ರಲ್ಲಿ ಬಾಲಸುಬ್ರಹ್ಮಣ್ಯಗೌಡ ರು ಜಯಲಕ್ಷ್ಮಿಗೆ ಯಾವಾಗ ಮನೆ ಕೊಟ್ಟಿದ್ದರು, ಯಾವಾಗ ಕಟ್ಟಿದ್ದರು ಎಂಬಿತ್ಯಾದಿಯಾಗಿ ಮಾಹಿತಿ ನೀಡಿದ್ದರು ಎಂದರೆ ಸರಿ. ಆದರೂ ಕೂಡ ನಾನು ಆ ಮನೆ ಕಟ್ಟಿದ ಖರ್ಚು 5,84,000 ರೂಪಾಯಿ ಎಂದು ಆರೋಪಿತರ ಆಸ್ತಿ ಲೆಕ್ಕಕ್ಕೆ ಕಾಣಿಸಿದ್ದೇನೆ ಎಂದರೆ ಸರಿ. ಕೊಬ್ಬರಿ ಶೆಡ್ ಇನ್ನೂ construction ಹಂತದಲ್ಲಿತ್ತು ಎಂದರೆ ಸಾಕ್ಷಿಯು ನೆಲಮಹಡಿ ಕೆಲಸ ಮುಗಿದಿತ್ತು, ಇನ್ನೂ ಕೆಲಸ ನಡೆಯುತ್ತಿತ್ತು ಎನ್ನುತ್ತಾರೆ. ಸದರಿ ಗೋದಾಮಿನಲ್ಲಿ 1ನೇ ಮಹಡಿ ಇಲ್ಲ ಎಂದರೆ ಸರಿಯಲ್ಲ. ನಾನು ಅಲ್ಲಿಗೆ ಹೋಗದೇ ಇರುವುದರಿಂದಲೇ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಆ ಶೆಡ್ ಕಟ್ಟಲು ಅವರ ತೋಟದಲ್ಲಿದ್ದಂತಹ ಮರಗಳನ್ನು ಬಳಕೆ ಮಾಡಿದ್ದರು ಎಂಬುದು ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನಾನು ಹೋದ ಸಂದರ್ಭದಲ್ಲಿ ಮರಗಳ ತುಂಡುಗಳಿದ್ದವು ಅದರ ಮೌಲ್ಯಮಾಪನ ಕೂಡ ಮಾಡಿದ್ದೇನೆ ಎಂದರೆ ಸಾಕ್ಷಿಯು ಕೆಲವು ತುಂಡುಗಳಿದ್ದವು ಎನ್ನುತ್ತಾರೆ. ಅವುಗಳಿಗೆ 9400ರೂಪಾಯಿ ಮೌಲ್ಯಮಾಪನ ಮಾಡಿದ್ದೇನೆ ಎಂದರೆ ಸರಿ. ಅವುಗಳು ಆ ಗೋದಾಮು ಕಟ್ಟಲು ಬಳಸಿದ ನಂತರ ಮಿಕ್ಕಿದ ಮರಗಳ ತುಂಡುಗಳು ಎಂದರೆ ಸರಿಯಲ್ಲ. ಆ ಕಟ್ಟಡ ಕಟ್ಟಲು ಬೇಕಾದ ಕಬ್ಬಿಣದ ಸಲಾಕೆಗಳನ್ನು ಗುಜರಿಯಿಂದ ತಂದದ್ದು ಆ ಬಗ್ಗೆ ಕೂಡ ನನಗೆ ಮಾಹಿತಿ ನೀಡಿದ್ದರು ಎಂದರೆ ಸರಿಯಲ್ಲ. ಅವರು ಅದನ್ನು ಯಾರಿಂದ ತಂದಿದ್ದರೆನ್ನುವುದು ನನಗೆ ಗೊತ್ತಿತ್ತು ಏಕೆಂದರೆ ಆರೋಪಿ ನನಗೆ ತೋರಿಸಿರುತ್ತಾರೆ ಎನ್ನುವುದು ಸರಿಯಲ್ಲ. ನನ್ನ ತನಿಖಾ ಕಾಲದಲ್ಲಿ ನಾನು ಕಬ್ಬಿಣದ ಸಲಾಖೆಗಳನ್ನು ಎಲ್ಲಿಂದ ತಂದದ್ದೆಂದು ತನಿಖೆ ಮಾಡಿಲ್ಲ ಎಂದರೆ ಸಾಕ್ಷಿಯು ಯಾವುದೇ ಬಿಲ್ಲುಗಳು ಆ ಸಂದರ್ಭದಲ್ಲಿ ಸಿಕ್ಕಿರಲಿಲ್ಲ ಎನ್ನುತ್ತಾರೆ. ಆ ಪೂರ್ತಿ ಗೋದಾಮಿನ ಮೌಲ್ಯ 3ಲಕ್ಷ ರೂಪಾಯಿ ಎಂದು ಕಾಣಿಸಿದ್ದೇನೆ ಎಂದರೆ ಸರಿ. ನನ್ನ ಮುಖ್ಯವಿಚಾರಣೆಯಲ್ಲಿ 3,84,000ರೂಪಾಯಿ ಎಂದು ದೋಷಪಟ್ಟಿಯಲ್ಲಿ 3 ಲಕ್ಷ ಎಂದು ತೋರಿಸಿದ್ದೇನೆ ಯಾವುದು ಸರಿ ಎಂದರೆ ಸಾಕ್ಷಿಯು ಪಿಡಬ್ಲ್ಯೂಡಿಯ

ಕಾರ್ಯಪಾಲಕ ಅಭಿಯಂತರರು ತೋರಿಸಿರುವುದು ಸರಿ ಎನ್ನುತ್ತಾರೆ. ಎರಡೂ ಸೇರಿ 9,64,000ರೂಪಾಯಿಯನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ದುರುದ್ದೇಶಪೂರ್ವಕವಾಗಿ ನಾನು ಸೇರಿಸಿಕೊಂಡದ್ದು ಎಂದರೆ ಸರಿಯಲ್ಲ. ಆ ಶೆಡ್ ಕಟ್ಟಲು ಕೇವಲ 1ವರೆ ಲಕ್ಷ ರೂಪಾಯಿ ಮಾತ್ರ ಖರ್ಚಾಗಿತ್ತು ಅದಕ್ಕೆ ಬಿಲ್ ಕೂಡ ಹಾಜರುಪಡಿಸಿದ್ದರು ಎಂದರೆ ಸರಿಯಲ್ಲ. ಆ ಬಿಲ್ ನ್ನು ನಾನು ದುರುದ್ದೇಶಪೂರ್ವಕವಾಗಿ ಪರಿಗಣಿಸಿಲ್ಲ ಎಂದರೆ ಸರಿಯಲ್ಲ.

91.1997ರಲ್ಲಿ ಸ.ನಂ.135/3ರ ಆಸ್ತಿ ಆರೋಪಿತರ ಹೆಂಡತಿಗೆ ಬಂದಿದ್ದರಿಂದ ನನಗೆ ಅದರಲ್ಲಿ ಏನೇನು ಬೆಳೆ ಬೆಳೆಯುತ್ತಿದ್ದಾರೆ ಎನ್ನುವುದು ಗೊತ್ತಿತ್ತು ಎಂದರೆ ಸರಿಯಲ್ಲ. ನನಗೆ ತೋರಿಸಿದ ದಾಖಲೆಗಳು 1997ರಲ್ಲಿ ಅಸ್ತಿತ್ವದಲ್ಲಿತ್ತು ಎಂದರೆ ಸಾಕ್ಷಿಯು ಪಹಣಿ ಇತ್ತು, ಅದರಲ್ಲಿ ತೆಂಗು ಎಂದು ನಮೂದಾಗಿತ್ತು ಎನ್ನುತ್ತಾರೆ. ಸ.ನಂ.135/3 ರಲ್ಲಿ 60 ತೆಂಗಿನ ಮರ ಮತ್ತು ಸ.ನಂ.10/10ರಲ್ಲಿ 40 ತೆಂಗಿನ ಮರಗಳು ಇದ್ದವು ಎಂದರೆ ಸಾಕ್ಷಿಯು ತೆಂಗಿನಮರಗಳು ಎಷ್ಟಿತ್ತೆಂದು ಗೊತ್ತಿಲ್ಲ ಆದರೆ ತೆಂಗು ಬೆಳೆಯುತ್ತಾರೆ ಎಂದು ಗೊತ್ತಿತ್ತು ಎನ್ನುತ್ತಾರೆ. ಒಂದು ಮರದಿಂದ 15ಸಾವಿರ ತೆಂಗಿನಕಾಯಿ ಇಳುವರಿ ಬರುತ್ತದೆ ಎನ್ನುವುದು ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಸ.ನಂ.10/10ರಲ್ಲಿ ಬೆಳೆದಿರುವ ತೆಂಗಿನಕಾಯಿ ಇಳುವರಿ ಆದಾಯವನ್ನು ನಾನು 2006ರವರೆಗೆ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ಏನು ದಾಖಲೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ತೋಟಗಾರಿಕೆ ಇಲಾಖೆಯವರು ಕೊಟ್ಟಿರುತ್ತಾರೆ ಎನ್ನುತ್ತಾರೆ. ತೋಟಗಾರಿಕಾ ಇಲಾಖೆಯಿಂದ ನಾನು ಸ.ನಂ.135/3 ಮತ್ತು 10/10ರ ಮಾಹಿತಿ ಕೇಳಲೇ ಇಲ್ಲ ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ದಾಖಲೆ ನಾನು ತೋಟಗಾರಿಕಾ ಇಲಾಖೆಯ ಉಪನಿರ್ದೇಶಕರಿಗೆ ಆದಾಯಮತ್ತು ಖರ್ಚುವೆಚ್ಚಗಳ ಮಾಹಿತಿ ಕೋರಿ ಬರೆದಿರುವ ಪತ್ರ ಎಂದರೆ ನಿಜ. ಅದನ್ನು **ನಿಡಿ-45** ಎಂದು ಗುರುತಿಸಲಾಯಿತು. ಈಗ ತೋರಿಸಿದ ದಾಖಲೆಯಲ್ಲಿ ಸರ್ವೆ ನಂಬರ್ 135/3 ಹಾಗೂ 10/10ರ ಖರ್ಚುವೆಚ್ಚದ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಇದು 2 ಹಾಳೆಗಳನ್ನೊಳಗೊಂಡಿದ್ದು **ನಿಡಿ-46** ಎಂದು ಗುರುತಿಸಲಾಯಿತು. 2006ರವರೆಗೆ  ಸರ್ವೆ ನಬರ್ 10/10ರಲ್ಲಿ ಮತ್ತು 2009ರವರೆಗೆ ಸ.ನಂ.135/3ರ ತೆಂಗಿನ ಇಳುವರಿ ಆದಾಯ ಸುಮಾರು 10,20,000ರೂಪಾಯಿ ಎಂದರೆ ಸರಿಯಲ್ಲ. ಈ ಆದಾಯಕ್ಕೆ ಸಂಬಂಧಿಸಿದಂತೆ ಸೂಕ್ತ ದಾಖಲೆಗಳನ್ನು

ಕೊಟ್ಟರೂ ಕೂಡ ಅದನ್ನು ಪರಿಗಣಿಸಿಲ್ಲ ಎಂದರೆ ಸರಿಯಲ್ಲ. ನನ್ನ ತನಿಖಾ ಕಾಲದಲ್ಲಿ ಈ ಎರಡೂ ಸರ್ವೆ ನಂಬರುಗಳ ಆಸ್ತಿ ಆರೋಪಿತರ ಹೆಂಡತಿ ಹೆಸರಿನಲ್ಲಿ ಇತ್ತು ಎನ್ನುವುದ ನನ್ನ ಗಮನಕ್ಕೆ ಬಂದಿತ್ತು ಎಂದರೆ ಸರಿ.

92.ಚಾಸಾ-7ರವರು ಕೆ ಎಸ್ ಆರ್ ಟಿ ಸಿಯ ವಿಭಾಗೀಯ ನಿಯಂತ್ರಣಾಧಿಕಾರಿಗಳಾಗಿದ್ದರು ಎಂದರೆ ಸರಿ. ಸದರಿಯವರು ಆರೋಪಿತರಿಗೆ ಇಲಾಖಾ ತನಿಖೆನಡೆಸಿ ವಜಾಗೊಳಿಸಲು ಆದೇಶ ಮಾಡಿದ್ದರು ಎಂದರೆ ಸಾಕ್ಷಿಯು 3-11-10ಕ್ಕೆ ವಜಾಗೊಳಿಸಿರುವುದು ಎನ್ನುತ್ತಾರೆ. ಆರೋಪಿತರು ತಾನು ಯಾವತ್ತಿನಿಂದ ಯಾವತ್ತಿನವರೆಗೆ ಗೈರುಹಾಜರಾಗಿದ್ದೆ ಎನ್ನುವ ವಿಚಾರವನ್ನು ಆ ಇಲಾಖಾ ವಿಚಾರಣೆಯಲ್ಲಿ ತೋರಿಸಿದ್ದನ್ನು ನನಗೆ ತೋರಿಸಿದ್ದರು ಎಂದರೆ ಸರಿ. 2006ರಿಂದ 2008ರವರೆಗೆ ಅವರು ಅನಧಿಕೃತ ಗೈರುಹಾಜರಾಗಿದ್ದರು ಎಂದರೆ ಸಾಕ್ಷಿಯು ಆ ಆದೇಶದ ಪ್ರಕಾರ ಇದೆ ಎನ್ನುತ್ತಾರೆ. ಆರೋಪಿತರು ನಿವೇಶನ ಇತ್ಯಾದಿ ಖರೀದಿ ಮಾಡಿರುವುದು ಈ ಅನಧಿಕೃತ ಗೈರುಹಾಜರಾಗಿ ಇದ್ದ ಅವಧಿಯಲ್ಲಿ ಎಂದರೆ ಸರಿ. ಆ ಗೈರುಹಾಜರಾದ ಸಮಯದಲ್ಲಿ ಅವರು ಕರ್ತವ್ಯಕ್ಕೆ ಹಾಜರಾಗುತ್ತಿರಲಿಲ್ಲ ಎಂದರೆ ಸರಿ. ಚಾಸಾ-13 ರವರನ್ನು ವಿಚಾರಣೆ ಮಾಡಿದಾಗ ಆರೋಪಿತರು ಅನಧಿಕೃತ ಗೈರುಹಾಜರಾಗಿರುವ ಅವಧಿ ಬಗ್ಗೆ ಮಾಹಿತಿಕೊಟ್ಟರು ಎಂದರೆ ನಿಜ. ನಾನು ವಶಪಡಿಸಿಕೊಂಡ ದಾಖಲೆಗಳಲ್ಲಿ 14-8-1992ರಲ್ಲಿ ಆರೋಪಿತರ ಹೆಂಡತಿ ಶ್ರೀಮತಿ ಶಂಕರಮ್ಮ ಎಂಬುವವರಿಂದ ಆಸ್ತಿ ಖರೀದಿಸಿರುವ ದಾಖಲೆ ಕೂಡ ಇತ್ತು ಎಂದರೆ ಸರಿ. ಆ ಸ್ವತ್ತನ್ನು ಜಯಲಕ್ಷ್ಮಿರವರ ತಂದೆ ಭೋಜಪ್ಪ ರವರು ಜಯಲಕ್ಷ್ಮಿಗೆ ಕೊಡಿಸಿದ್ದು ಎಂದರೆ ಸರಿಯಲ್ಲ. ಆ ವಿಚಾರ ನನಗೆ ಗೊತ್ತಿದ್ದರೂ ಕೂಡ ದುರುದ್ದೇಶಪೂರ್ವಕವಾಗಿ ಆರೋಪಿತರು ಖರೀದಿಸಿದ್ದೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

93.ದೋ.ಪಟ್ಟಿಯಲ್ಲಿ ನಾನು 2 ಬೋರ್‌ವೆಲ್ ಕಾಣಿಸಿದ್ದೇನೆಂದರೆ ಸರಿ. ದಿನಾಂಕ 11-12-2006 ರಂದು ಸುವರ್ಣ ಎಂಬುವವರಿಂದ 1 ಎಕರೆ 19 ಗುಂಟೆಯನ್ನು ಆರೋಪಿತರು ಸ.ನಂ.95/2ರಲ್ಲಿ ಖರೀದಿಸಿರುತ್ತಾರೆಂದರೆ ಸರಿ. ಆ ಜಮೀನಿನಲ್ಲಿ ಬೋರ್‌ವೆಲ್ ಇತ್ತು ಎಂದರೆ ಸರಿಯಲ್ಲ. ಅದನ್ನು ದುರುದ್ದೇಶಪೂರ್ವಕವಾಗಿ ಅದನ್ನು ಆರೊಪಿತರೇ ತೆಗೆಸಿದ್ದೆಂದು ಕಾಣಿಸಿದ್ದೇನೆ ಎಂದರೆ ಸರಿಯಲ್ಲ.

ಸದರಿ ಸುವರ್ಣರವರು ಆ ಜಮೀನಿನಲ್ಲಿ 5 ವರ್ಷಗಳ ಹಿಂದೆ ತಾನು ಬೋರ್ವೆಲ್ ತೋಡಿಸಿದ್ದು ಅದು ವಿಫಲಗೊಂಡಿದ್ದು ವಿದ್ಯುತ್ ಸೌಲಭ್ಯ ಕೂಡ ತೆಗೆದುಕೊಂಡಿರಲಿಲ್ಲ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಆದರೂ ಕೂಡ ಆರೋಪಿತರು ಅದಕ್ಕೆ 40,000ರೂಪಾಯಿ ಖರ್ಚು ಮಾಡಿದ್ದಾರೆಂದು ದೋ.ಪಟ್ಟಿಯಲ್ಲಿ ಕಾಣಿಸಿದ್ದೇನೆ ಎಂದರೆ ಸರಿಯಲ್ಲ.

94.ಆರೋಪಿತರ ಮನೆಯನ್ನು ಶೋಧನೆ ಮಾಡಿದಾಗ ಅವರ ಮನೆಯಲ್ಲಿ 100ಗ್ರಾಂ ಚಿನ್ನ ಇತ್ತೆಂದು ಮಹಜರಿನಲ್ಲಿ ಕಾಣಿಸಿದ್ದೇನೆ ಎಂದರೆ ಸರಿಯಲ್ಲ. ಅಂತಿಮ ವರದಿಯಲ್ಲಿ, ಆರೋಪಿತರು ಚಿನ್ನವನ್ನು ಅಡವಿಟ್ಟು ಸಾಲ ಪಡೆದುಕೊಂಡಿದ್ದಾರೆಂದು ಹೇಳಿದ್ದೇನೆಂದರೆ ಸರಿ. ಆರೋಪಿತರ ಮಗನೇ ಫ್ಯಾನ್ಸಿ ಸ್ಟೋರ್ ಗೆ ಹಣ ವಿನಿಯೋಗಿಸಿದ್ದರೂ ಕೂಡ ನಾನು ಆರೋಪಿತರು ವಿನಿಯೋಗಿಸಿದ್ದೆಂದು ಸುಳ್ಳು ಆರೋಪ ಮಾಡಿರುತ್ತೇನೆಂದರೆ ಸರಿಯಲ್ಲ. ಒಟ್ಟು ಕುಟುಂಬದ ತೀರ್ಮಾನದಂತೆ ಫ್ಯಾನ್ಸಿ ಸ್ಟೋರ್ ನಡೆಸಲು ಮಂಜುನಾಥ್ ರವರಿಗೆ ಬಿಟ್ಟುಕೊಟ್ಟದ್ದು ಎಂದರೆ ಸಾಕ್ಷಿಯು 2002ರಲ್ಲಿ ಮಂಜುನಾಥ್ ರವರಿಗ ವಹಿಸಿಕೊಟ್ಟದ್ದು ಎನ್ನುತ್ತಾರೆ. ಆರೋಪಿತರು ಕೊಟ್ಟ ದಾಖಲೆಯಲ್ಲಿ 1995ರಲ್ಲಿ ಫ್ಯಾನ್ಸಿ ಸ್ಟೋರ್ ನ್ನು ಒಟ್ಟುಕುಟುಂಬದವರು ಮಂಜುನಾಥ್ ನಿಗೆ ವಹಿಸಿಕೊಟ್ಟಿದ್ದಾರೆಂದು ಕಂಡುಬರುತ್ತಿತ್ತು ಎಂದರೆ ಸರಿಯಲ್ಲ. ಅದರ ಬಾಡಿಗೆ 250ರೂಪಾಯಿ ಆಗಿದ್ದು ಅದನ್ನು ಮಂಜುನಾಥ್ ರವರೇ ಕಟ್ಟುತ್ತಿದ್ದರು ಎಂದರೆ ಸರಿಯಲ್ಲ. ದೋಪಟ್ಟಿಯಲ್ಲಿ ನಾನು ಮಂಜುನಾಥ್ ರವರು 2009ರವರೆಗೆ ಒಟ್ಟು 43,988ರೂಪಾಯಿ ಕಟ್ಟಿರುತ್ತಾರೆಂದು ಕಾಣಿಸಿರುತ್ತೇನೆ ಎಂದರೆ ಸಾಕ್ಷಿಯು ಅದು 6-4-2009ರವರೆಗೆ ಎನ್ನುತ್ತಾರೆ. ನನ್ನ ತನಿಖಾ ಕಾಲದಲ್ಲಿ ಆರೋಪಿತರು ಸದರಿ ಫ್ಯಾನ್ಸಿ ಸ್ಟೋರ್ ನ ಯಾವುದೇ ವ್ಯವಹಾರದಲ್ಲಿ ಭಾಗಿಯಾಗಿರುವುದಿಲ್ಲ ಎಂಬುದು ನನಗೆ ಕಂಡುಬಂದಿತ್ತು ಎಂದರೆ ಸರಿಯಲ್ಲ. ಆ ಫ್ಯಾನ್ಸಿಸ್ಟೋರ್ ನ ಯಾವುದೇ ವ್ಯವಹಾರಕ್ಕೆ ಸಂಬಂಧಪಟ್ಟ ದಾಖಲೆಗಳಲ್ಲಿ ಆರೋಪಿತರು ಸಹಿ ಹಾಕಿರುವುದಿಲ್ಲ ಎಂದರೆ ಸರಿ. ಆರೋಪಿತರು ತಮ್ಮ ಅನುಬಂಧ ಮಂಜುನಾಥ್ ರವರಿಗೆ ಫ್ಯಾನ್ಸಿ ಸ್ಟೋರ್ ನಲ್ಲಿ1995ರಿಂದ 50000ರೂಪಾಯಿ ವರ್ಷಕ್ಕೆ ಆದಾಯ ಇತ್ತೆಂದು ಕಾಣಿಸಿರುತ್ತಾರೆಂದರೆ ಸರಿ. ಸದರಿ ಫ್ಯಾನ್ಸಿ ಸ್ಟೋರ್ ಗೆ ಆರೋಪಿತರಿಂದ ಯಾವುದೇ ಹಣ ಸಂದಾಯ ಅಗಿರಲಿಲ್ಲ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಪಟ್ಟಂತೆ ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ.

95.ಎಲ್ ಐ ಸಿ ಪ್ರೀಮಿಯಂಗಳು ಆರೋಪಿತರು ಮತ್ತು ಅವರ ಹೆಂಡತಿ ಮಕ್ಕಳ ಹೆಸರಿನಲ್ಲೂ ಇತ್ತು, ಆ ಬಗ್ಗೆ ದಾಖಲೆ ನನ್ನ ತನಿಖಾ ಸಮಯದಲ್ಲಿ ಸಂಗ್ರಹಿಸಿರುತ್ತೇನೆ. ಆ ಎಲ್ಲಾ ಪ್ರೀಮಿಯಂಗಳು ಅವರವರ ಸಂಬಳದಿಂದ ಪಾವತಿಯಾಗುತ್ತಿತ್ತು ಎಂದರೆ ಸರಿಯಲ್ಲ. ಅವರ ಮಗ ಶೇಖರ್ ಆ ಸಮಯದಲ್ಲಿ ಕೆಲಸ ಮಾಡುತ್ತಿದ್ದ ಈ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿ. ಆ ಎಲ್ ಐ ಸಿ ಪ್ರೀಮಿಯಂ ನ್ನು ಅವರೇ ಸ್ವತಃ ಕಟ್ಟುತ್ತಿದ್ದರು ಎಂದರೆ ಸರಿಯಲ್ಲ. ಆ ಬಗ್ಗೆ ಶೇಖರ್ ರವರನ್ನು ನಾನು ವಿಚಾರಣೆ ಮಾಡಿಲ್ಲ. ಆರೋಪಿತರು ಕೊಟ್ಟ ದಾಖಲೆಗಳ ಪ್ರಕಾರ ಶೇಖರ್ ಆ ಪ್ರೀಮಿಯಂ ಹಣವನ್ನು ಕಟ್ಟುತ್ತಿದ್ದುದು ಎಂದರೆ ಸರಿಯಲ್ಲ. ಮಂಜುನಾಥ್ ರವರು 3 ಪ್ರೀಮಿಯಂ ಪಡೆದುಕೊಂಡಿದ್ದರು ಎಂದರೆ ಸಾಕ್ಷಿಯು 3 ಎಲ್ ಐ ಸಿ ಪಾಲಿಸಿಯನ್ನು ಆರೋಪಿತರು ಪಡೆದುಕೊಂಡಿದ್ದರು ಬಜಾಜ್ ಅಲಿಯಾನ್ಸ್ ಪಾಲಿಸಿ ಮಾತ್ರ ಮಂಜುನಾಥ್ ಪಡೆದಿದ್ದರು ಎನ್ನುತ್ತಾರೆ. ಆ ಪ್ರೀಮಿಯಂನ್ನು ಮಂಜುನಾಥ್ ಕಟ್ಟಿದ್ದು ಎಂದರೆ ಸರಿಯಲ್ಲ. ಸಾಕ್ಷಿಯು ದಿನಾಂಕ 21-5-2008ರಲ್ಲಿ ಮಂಜುನಾಥ್ ರವರು 10000ರೂಪಾಯಿ ಕಟ್ಟಿರುತ್ತಾರೆ, ಅದನ್ನು ಗಣನೆಗೆ ತೆಗೆದುಕೊಂಡಿರುತ್ತೇನೆ ಎನ್ನುತ್ತಾರೆ. ಅದೇ ರೀತಿ ಎಲ್ಲಾ 4 ಪಾಲಿಸಿ ಕೂಡ ಮಂಜುನಾಥ್ ರವರೇ ಪಡೆದುಕೊಂಡು ಪಾವತಿಸಿದ್ದು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಅವರು ಫ್ಯಾನ್ಸಿ ಸ್ಟೋರ್ ನಡೆಸುತ್ತಿದ್ದುದು ಎಂದರೆ ಸರಿ. ಆ ಪ್ರೀಮಿಯಂನ್ನು ಕಟ್ಟಿದ್ದನ್ನು ಬುಕ್ಸ್ ಆಫ್ ಅಕೌಂಟ್ ನಲ್ಲಿ ಕಾಣಿಸಿದ್ದರು ಎಂದರೆ ಸರಿಯಲ್ಲ. 10000ರೂಪಾಯಿ ಹಣವನ್ನು ಮಂಜುನಾಥ್ ರವರೇ ಕಟ್ಟಿದ್ದರೂ ಕೂಡ ಆರೋಪಿತರೇ ಕಟ್ಟಿದ್ದೆಂದು ಸುಳ್ಳು ಕಾಣಿಸಿದ್ದೇನೆ ಎಂದರೆ ಸರಿಯಲ್ಲ. ಮಂಜುನಾಥ್ ರವರೇ ಕಟ್ಟಿದ್ದರೂ ಕೂಡ ಅದನ್ನು ಆರೋಪಿತರ ಖರ್ಚಿನ ಲೆಕ್ಕಕ್ಕೆ ಉದ್ದೇಶಪೂರ್ವಕವಾಗಿ ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ತಿಳಿದಿದ್ದರೂ ಸಹ ನಾನು ನನಗೆ ಬೇಕಾದ ರೀತಿಯಲ್ಲಿ ತನಿಖೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರೀಮಿಯಂ ಬಗ್ಗೆ ಮಂಜುನಾಥ್ ರವರನ್ನು ನಾನು ವಿಚಾರಣೆ ಮಾಡಿರುವುದಿಲ್ಲ. ಪ್ರೀಮಿಯಂನ್ನು ಅವರೇ ಕಟ್ಟಿದಾರೆಂದು ನನ್ನ ಗಮನಕ್ಕೆ ಬಂದಿದ್ದರೂ ಸಹ ನಾನು ಆ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

96.ನಾನು ಪಿಡಬ್ಲ್ಯೂಡಿ ಕಛೇರಿಯಿಂದ ಚಾಸಾ-100ರವರಿಂದ ವರದಿಯನ್ನು ತರಿಸಿಕೊಳ್ಳುವ ಪೂರ್ವದಲ್ಲಿ ಆರೋಪಿತರು ಮತ್ತು ಅವರ ಕುಟುಂಬದವರು ಅವರ ಜಮೀನಿನಲ್ಲಿ ಏನೇನು ಬೆಳೆಗಳನ್ನು ಬೆಳೆಯುತ್ತಿದ್ದರು ಎನ್ನುವ ಮಾಹಿತಿಯನ್ನು ಕೊಡಲಿಲ್ಲ ಎಂದರೆ ಸರಿಯಲ್ಲ. ನಮ್ಮ ಇಲಾಖೆಯಲ್ಲಿರುವ ಪ್ರಿಂಟೆಡ್ ಫಾರ್ಮೇಟ್ ಗಳನ್ನು ಭರ್ತಿ ಮಾಡಿ ಕೊಟ್ಟಿರುತ್ತೇನೆ. ಅದರಲ್ಲಿರುವ ಮಾಹಿತಿಯನ್ನು ಮಾತ್ರ ನೀಡಿರುವುದು ಎಂದರೆ ಸರಿ. ನಾನು ಕೇಳಿದ ಮಾಹಿತಿಯಲ್ಲಿ ಆರೋಪಿತರು ಏನೇನು ಬೆಳೆ ಬೆಳೆಯುತ್ತಿದ್ದರು ಎನ್ನುವುದನ್ನು ಕಾಣಿಸಿದ್ದೇನಾ ಎಂದರೆ ಸಾಕ್ಷಿಯು ಎ ಪಿ ಆರ್ ನಲ್ಲಿ ಏನು ಕಾಣಿಸಿದ್ದರೋ ಅದರಂತೆ ಕಾಣಿಸಿದ್ದೇನೆ ಎನ್ನುತ್ತಾರೆ. ಎಪಿ ಆರ್ ನಲ್ಲಿ ಅವರು ಏನು ಬೆಳೆ ಬೆಳೆಯುತ್ತಿದ್ದರು ಎಷ್ಟಕ್ಕೆ ಮಾರಾಟ ಮಾಡುತ್ತಿದ್ದರು ಬಂದ ಆದಾಯ ಎಷ್ಟು ಅವುಗಳ ಸರ್ವೆ ನಂಬರ್ ಇತ್ಯಾದಿಗಳನ್ನು ಕಾಣಿಸಿದ್ದರು ಎಂದರೆ ನಿಜ. ಹಾಗೆಯೇ ಅವರು ಎಷ್ಟು ಹಸು ಸಾಕಿದ್ದರು, ಎಷ್ಟು ಆದಾಯ ಬರುತ್ತಿತ್ತು ಎಷ್ಟು ಮಾರಾಟ ಮಾಡುತ್ತಿದ್ದರು, ಎಷ್ಟು ಬೆಣ್ಣೆ ಇತ್ಯಾದಿ ಎಂಬಿತ್ಯಾದಿ ಮಾಹಿತಿ ಕೊಟ್ಟಿದ್ದರು ಎಂದರೆ ಸರಿ. ನಾನು ಅದಕ್ಕೆ ಸಂಬಂಧಿಸಿದ ತಜ್ಞರ ಜೊತೆ ಚರ್ಚಿಸದೆ ಕಛೇರಿಯಲ್ಲೇ ಕುಳಿತು ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಎಲ್ಲಾ ಮಾಹಿತಿಯನ್ನು ನೀಡದೇ ಇದ್ದುದರಿಂದ ನನ್ನ ಸೂಚನೆಯಂತೆ ಚಾಸಾ-100ರವರು ಆರೋಪಿತರ ಕುಟುಂಬದ ಖರ್ಚು ವೆಚ್ಚ 4ಲಕ್ಷ ರೂಪಾಯಿ ಎಂದು ಕಾಣಿಸಿದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಅವರ ಮನೆಯಲ್ಲಿ ಆರೋಪಿ ಅವರ ಹೆಂಡತಿ ಮತ್ತು ಮಗ ಮಂಜುನಾಥ್ ಮೂವರೇ ಇದ್ದುದು ಎಂದರೆ ಸರಿ. ಆ ಸಮಯದಲ್ಲಿ ಚೈತ್ರಾ ರವರು ಬೆಂಗಳೂರಿನಲ್ಲಿ ಕರ್ತವ್ಯ ಮಾಡುತ್ತಿದ್ದರು ಎಂದರೆ ನಿಜ. ಚಿಕ್ಕಮಕ್ಕಳು ಯಾರೂ ಇರಲಿಲ್ಲ ಎಂದರೆ ಸರಿ. ಆದ್ದರಿಂದ ಹಾಲು, ಬೆಣ್ಣೆ ಇತ್ಯಾದಿ ಉಪಯೋಗಿಸುತ್ತಿದ್ದು ಕಮ್ಮಿ ಎಂದರೆ ನಾನು ಹೇಳಲಾಗುವುದಿಲ್ಲ. ನಾನು ಈ ಎಲ್ಲಾ ವಿವರಗಳನ್ನು ಚಾಸಾ-100ರವರಿಗೆ ಸರಿಯಾಗಿ ಹೇಳಿದ್ದರೆ ಅವರು ಆರೋಪಿತರ ಖರ್ಚು ವೆಚ್ಚ ನಿಖರವಾಗಿ 2ಲಕ್ಷ ರೂಪಾಯಿ ಎಂದು ತೋರಿಸುತ್ತಿದ್ದರು ಎಂದರೆ ಸರಿಯಲ್ಲ.

97.ಆರೋಪಿತರು ತಮ್ಮ ಬಳಿ ಇದ್ದಂತಹ 3 ಬೈಕಿನಲ್ಲಿ ಒಂದು ಬೈಕನ್ನು ನಂಜೇಗೌಡ ಎನ್ನುವವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿ. ಅವರು ಆರೋಪಿತರ ಮನೆಯಲ್ಲಿ ಬಾಡಿಗೆಗೆ

ವಾಸವಿದ್ದರು ಎಂದರೆ ಸರಿಯಲ್ಲ. ಮನೆ ನಂಬರ್23 ರಲ್ಲಿ ಇದ್ದರು ಎಂದರೆ ಅವರೆಯಾ ಎಂದು ಗೊತ್ತಿಲ್ಲ. ಅವರು ಇದ್ದಂತಹ ಮನೆಗೆ ವರ್ಷಕ್ಕೆ ಎಷ್ಟು ಬಾಡಿಗೆ ಕಟ್ಟುತ್ತಿದ್ದರು ಎನ್ನುವ ವಿವರವನ್ನು ಅನುಬಂಧದಲ್ಲಿ ನೀಡಿದ್ದರು ಎಂದರೆ ಸರಿ. ಈಗ ನನಗೆ ತೋರಿಸಿದ ದಾಖಲೆ ನಾನು ನಂಜೇಗೌಡರಿಗೆ ವಿಚಾರಣೆಗೆ ಹಾಜರಾಗಲು ನೀಡಿದ ನೋಟೀಸು ಎಂದರೆ ನಿಜ. ಅದನ್ನು **ನಿಡಿ-47** ಎಂದು ಗುರುತಿಸಲಾಯಿತು. ತನಿಖಾ ಕಾಲದಲ್ಲಿ ನಾನು ಅವರನ್ನು ವಿಚಾರ ಮಾಡಿದಾಗ ಅವರು ಆರೋಪಿತರ ಬಳಿ ಬಾಡಿಗೆದಾರರಾಗಿದ್ದರು ಮತ್ತು ಅವರೇ ಆರೋಪಿತರಿಂದ ಒಂದು ದ್ವಿಚಕ್ರ ವಾಹನ ಖರೀದಿ ಮಾಡಿರುವುದೆಂದು ಗೊತ್ತಾಯಿತು ಎಂದರೆ ಸಾಕ್ಷಿಯು ಬಾಡಿಗೆದಾರರಾಗಿದ್ದ ನಂಜೇಗೌಡರು ವಿಚಾರಣೆಗೆ ಬಂದಿರುತ್ತಾರೆ, ಆದರೆ ವಾಹನ ಖರೀದಿಸಿದ ನಂಜೇಗೌಡರು ವಿಚಾರಣೆಗೆ ಬಂದಿಲ್ಲ ಎನ್ನುತ್ತಾರೆ. ಈಗ ನನಗೆ ತೋರಿಸಿದ ದಾಖಲೆಯಂತೆ ಆರೋಪಿತರು ತಾನು ಯಾುರುಯಾರಿಗೆ ಬಾಡಿಗೆಗೆ ಕೊಟ್ಟಿದ್ಧೆ ಅದರಿಂದ ಎಷ್ಟು ಬಾಡಿಗೆ ಬರುತ್ತಿತ್ತು ಎನ್ನುವ ಮಾಹಿತಿ ಇಇರುತ್ತದೆ ಎಂದರೆಸ ರಿ. ಅದನ್ನು **ನಿಡಿ-48** ಎಂದು ಗುರುತಿಸಲಾಯಿತು.

98.ನಾನು ಯಾವತ್ತೂ ಮಂಜುನಾಥ್ ನಡೆಸುತ್ತಿದ್ದ ಫ್ಯಾನ್ಸಿ ಸ್ಟೋರ್ ಗೆ ಭೇಟಿ ನೀಡಿಲ್ಲ. ಅಲ್ಲಿ ಟೆಲಿಫೋನ್ ಸೌಲಭ್ಯ ಇತ್ತೆಂದು ಇಲಾಖೆಯವರಿಂದ ತಿಳಿಯಿತು. ಅದು ಮಂಜುನಾಥ್ ರವರ ಹೆಸರಿನಲ್ಲಿದ್ದು ಅವರೇ ಬಿಲ್ಲು ಕಟ್ಟುತ್ತಿದ್ದರೆಂದರೆ ನಿಜ. ಅಲ್ಲಿ ಒಂದು ಕಾಯಿನ್ ಬೂತ್ ಕೂಡ ಇತ್ತು ಎಂದರೆ ಸಾಕ್ಷಿಯು ಅದು ಗೊತ್ತಿಲ್ಲ ಆದರೆ ಮಂಜುನಾಥ್ ರವರ ಹೆಸರಿಗೆ ಮೊಬೈಲ್ ಇತ್ತು ಎನ್ನುತ್ತಾರೆ. ನನ್ನ ಮುಖ್ಯವಿಚಾರಣೆಯ ಪುಟ 64ರ ಪ್ಯಾರಾ 118ರಲ್ಲಿ ಕಾಯಿನ್ ಬೂತ್ ಇತ್ತು ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಅದರ ವಿವರ ನನಗೇನೂ ಗೊತ್ತಿಲ್ಲ. ಆ ಬಗ್ಗೆ ನಾನು ಹೇಳಿದ್ದರೆ ಅದು ಸುಳ್ಳು ಎಂದರೆ ಸರಿ.

99.ಆರೋಪಿತರ ಮಗಳು 2 ವರ್ಷ ಎಲ್ಲಿ ಕಲಿತದ್ದು ಎಂದರೆ ಸಾಕ್ಷಿಯು 2005-06ರ ಅವಧಿಯಲ್ಲಿ ಎಲ್ಲಿ ಓದುತ್ತಿದ್ದರು ಎನ್ನುವ ಬಗ್ಗೆ ಮಾಹಿತಿ ಸಿಗಲಿಲ್ಲ, ಆರೋಪಿತರು ತಿಳಿಸಿರುವುದಿಲ್ಲ ಎನ್ನುತ್ತಾರೆ. ಆದ್ದರಿಂದ ಅವರ ಮಗಳ ವಿದ್ಯಾಭ್ಯಾಸದ ಬಗ್ಗೆ ನನ್ನ ತನಿಖೆ ಅಪೂರ್ಣ ಎಂದರೆ ಸಾಕ್ಷಿಯು 1

ರಿಂದ 5, 8 ರಿಂದ 10ನೇ ತರಗತಿ ಮಾಹಿತಿ ದೊರೆತದ್ದರಿಂದ ಅದನ್ನು ನಮೂದು ಮಾಡಿರುತ್ತೇನೆ ಎನ್ನುತ್ತಾರೆ.

(ಆರೋಪಿತರ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**